## ನನ್ನ ಓದು

ಆಕೆ ಮಾಡಿಕೊಂಡ ಮತ್ತೊಂದು ಮದುವೆ ಈ ಹುಡುಗನಲ್ಲಿ ಅಸಹನೆ ಮೂಡಿಸಲಿಲ್ಲವೆನ್ನುವುದು ಆಶ್ಚರ್ಯ ಹುಟ್ಟಿಸುತ್ತದೆ. ಜಯಕುಮಾರ್ ಹುಟ್ಟಿದ ಮೇಲೆ, ತಾಯಿಯನ್ನೂ ಮಗುವನ್ನೂ ತನಗೆ ತಿಳಿದಂತೆ ಆ ಹುಡುಗನೇ ನೋಡಿಕೊಳ್ಳುವುದು. ಜಯಕುಮಾರ್ ಅವರ ಕ್ರಾಂತಿಯ ಉಪದ್ವ್ಯಾಪಗಳನ್ನು ಅಪಾರ ತಾಳ್ಮೆ, ವಿಶ್ವಾಸದಿಂದಲೇ ನಿಭಾಯಿಸುವುದು – ಈ ಎಲ್ಲವೂ ಆತನನ್ನು ಎತ್ತರದ ಸ್ಥಾನಕ್ಕೇರಿಸುತ್ತಲೇ ಹೋಗುತ್ತವೆ. ಜಯಕುಮಾರ್ ಇದ್ದಿದ್ದರೆ ಕೇಳಬಹುದಿತ್ತು, ನಿಮ್ಮಿಬ್ಬರ ನಡುವ ವೈಮನಸ್ಸೇ ಇರಲಿಲ್ಲವೆ, ಅಥವಾ ನಿಮ್ಮ ಮಾತುಗಳಲ್ಲಿ ಉತ್ಪ್ರೇಕ್ಷೆ ಇದೆಯೆ ಎಂದು.

ಕನ್ನಡನಾಡು ನೆನಪಿಡುವ ಕಾಮ್ರೇಡ್ ಜಯಕುಮಾರ್ ಅವರ ವ್ಯಕ್ತಿತ್ವಕ್ಕಿಂತ ಈ ಕೃತಿಯಲ್ಲಿ ನಮ್ಮನ್ನು ಆವರಿಸುವುದು ತಾಯಿ ಮತ್ತು ಮಗ. ಇದಕ್ಕೆ ಜಯಕುಮಾರ್ ಅವರ ಬದುಕಿನ ವಿಸ್ತಾರವಾದ ನಿರೂಪಣೆ ಇಲ್ಲದಿರುವುದು ಒಂದು ಕಾರಣವಾದರೆ, ಈ ವ್ಯಕ್ತಿತ್ವಗಳ ಶಕ್ತಿ ಮತ್ತೊಂದು ಕಾರಣ ಎನ್ನಿಸುತ್ತದೆ. ಈ ಅಂಶವನ್ನು ಮುನ್ನುಡಿ ಬರೆದಿರುವ ಪುರುಷೋತ್ತಮ ಬಿಳಿಮಲೆಯವರು ಪ್ರಸ್ತಾಪಿಸುತ್ತಾರೆ. ಜಯಕುಮಾರ್ ಬದುಕು ಇನ್ನೂ ವಿಸ್ತಾರವಾಗಿ ಬರಬೇಕಿತ್ತು ಎನ್ನುವ ಅವರ ಅಭಿಪ್ರಾಯವನ್ನು ಒಪ್ಪುತ್ತೇನೆ. ಆದರೆ ನನಗನ್ನಿಸಿದ್ದು ಜಯಕುಮಾರ್ ಅವರಿಗೆ ಆ ಉದ್ದೇಶ, ಆಸಕ್ತಿಯೇ ಇರಲಿಲ್ಲವೇನೋ ಎಂದು. ತನ್ನ ಬದುಕಿನ ಎರಡು ಘನ ವ್ಯಕ್ತಿತ್ವಗಳನ್ನು ಕುರಿತ ತನ್ನ ಪ್ರೀತಿ, ಕೃತಜ್ಞತೆಯನ್ನು ಹೇಳುವುದೇ ಅವರಿಗೆ ಮುಖ್ಯವಾಗಿತ್ತೇನೋ ಅನ್ನಿಸುತ್ತದೆ. ಮತ್ತು ಈ ಎರಡೂ ವ್ಯಕ್ತಿತ್ವಗಳು ಸಾರ್ವಜನಿಕವಾಗಿಯೂ ಮುಖ್ಯ ಎನ್ನುವ ಸತ್ಯದ ಕಾರಣಕ್ಕೂ ಇರಬೇಕು. ತಾಯಿಯ ಬಗ್ಗೆ ಬರೆಯುತ್ತಾ ಜಯಕುಮಾರ್ 'ನಮ್ಮಮ್ಮ ಗಾರ್ಕಿಯ ತಾಯಿಯ ಪ್ರತಿರೂಪವೇ ಆಗಿದ್ದಳು' ಎನ್ನುತ್ತಾರೆ. ಅವಳ ಧೈರ್ಯ, ಸಾಹಸ, ಜೀವನಪ್ರೀತಿ, ಸರಿ ಎಂದು ಕಂಡದ್ದಕ್ಕೆ ಆತುಕೊಳ್ಳುವ ಪರ... ಈ ಎಲ್ಲ ಕಾರಣಗಳಿಗಾಗಿ ಅನ್ನಿಸುತ್ತದೆ. ಆರಂಭದಲ್ಲಿ ಸಾಮಾನ್ಯರ ಅಸಾಮಾನ್ಯ ಚರಿತ್ರೆ ಎಂದು ನಾನು ಹೇಳಿದ್ದು ಈ ಹಿನ್ನೆಲೆಯಲ್ಲಿ.

ಕುಂಞಮ್ಮ ಮತ್ತು ಚಂದ್ರಶೇಖರ್ ಇಲ್ಲದಿದ್ದರೆ ಜಯಕುಮಾರ್ ರೂಪುಗೊಳ್ಳುವುದು ಸಾಧ್ಯವಿರಲಿಲ್ಲವೇನೋ. ಸಮುದಾಯದ ಸಾಂಸ್ಕೃತಿಕ ಚರಿತ್ರೆಯಲ್ಲಿ ಈ ಬಗೆಯ ಒಳ ಎಳೆಗಳನ್ನು ಕಾಣುವುದು ಸಮುದಾಯದ ಅರಿವಿಗೆ ತುಂಬಾ ಮುಖ್ಯ ಎನ್ನಿಸುತ್ತದೆ. ವ್ಯಕ್ತಿ ಪೂಜೆಯ ಅತಿ ಮತ್ತು ಅಪಾಯಗಳಿಂದ ತಪ್ಪಿಸಿಕೊಳ್ಳಲು ಈ ಬಗೆಯ ನಿರೂಪಣೆಗಳು ಹೆಚ್ಚು ಹೆಚ್ಚು ಬರಬೇಕು. ಮಾನವೀಯ ಸಂಬಂಧಗಳ ಆರ್ದ್ರತೆ ಕೂಡ ಇಲ್ಲಿನ ಮುಖ್ಯ ಕೇಂದ್ರ. ಸಮುದಾಯದ ಅನ್ಯಾಯಗಳ ವಿರುದ್ಧ ಹೋರಾಡಲು ಬದುಕಿಗೆ ಭದ್ರತೆ ನೀಡಿದ್ದ ಕೆಲಸವನ್ನೇ ಬಿಟ್ಟುಕೊಟ್ಟ ಜಯಕುಮಾರ್ ನೂರು ಕಷ್ಟಗಳನ್ನು ಕೊನೆಯವರೆಗೂ ಎದುರಿಸಿದರು. ಆದರೆ ಬೀದಿಯ ಹೋರಾಟದ ಭರದಲ್ಲಿ ತಾಯಿ ಸೆರಗನ್ನಾಗಲೀ, ಹೆಂಡತಿಯ ಅದಮ್ಯ ಪ್ರೀತಿಯನ್ನಾಗಲೀ ಕ್ಷಣವೂ ಮರೆಯಲಿಲ್ಲ. ಸಾಮಾನ್ಯವಾಗಿ ಇಂತಹ ವ್ಯಕ್ತಿತ್ವಗಳಲ್ಲಿ ಒಂದು ಬಗೆಯ ರೂಕ್ಷತೆಯನ್ನು ನಾವು ಕಾಣುತ್ತೇವೆ. ಆದರೆ ಜಯಕುಮಾರ್ ಅದಕ್ಕೆ ಹೊರತಾಗಿದ್ದರು. ಅವರ ಮದುವೆಯ ಸೊಗಸಾದ ವರ್ಣನೆ ಈ ಕೃತಿಯಲ್ಲಿದೆ. ಸರಳಾತಿ ಸರಳ ಮದುವೆಯಲ್ಲಿ ಲೀಲಾ ಯಾವ ಸೀರೆ ಉಟ್ಟಿದ್ದರೆನ್ನುವುದೂ ಇವರಿಗೆ ನೆನಪಿದೆ. ಮುಂದೆ ಜೀವನೋಪಾಯಕ್ಕಾಗಿ ನಡೆಸಿದ ಪ್ರಯೋಗಗಳು, ಅವುಗಳ ಸೋಲು, ಅದಕ್ಕೆ ಕಾರಣವಾದ ತನ್ನ ವ್ಯಾವಹಾರಿಕ ದಡ್ಡತನ, ಇವುಗಳನ್ನು ಹೇಳುವಾಗಲೂ ಅದೇ ನೋವು ನುಂಗಿ ನಕ್ಕ ನಗು.

ಕೃತಿಯಲ್ಲಿ ಮಿತಿಗಳಿಲ್ಲವೆಂದಲ್ಲ, ವಾಸ್ತವದ ವಿವರಗಳನ್ನು ಹೇಳುತ್ತಿರುವಾಗಲೂ ಕೊನೆಗೆ ಅಮ್ಮ ಮತ್ತು ಅಣ್ಣನ ವ್ಯಕ್ತಿತ್ವದ ಕೆಲವು ದೌರ್ಬಲ್ಯಗಳನ್ನೂ ಇಷ್ಟೇ ವಸ್ತುನಿಷ್ಠತೆಯಲ್ಲಿ ಕಟ್ಟಿಕೊಡಬೇಕಿತ್ತು. ಭಾವತೀವ್ರತೆ ಕೆಲವೊಮ್ಮೆ ಓದುಗರಿಗೆ ತೊಡಕಾಗುವುದೂ ಉಂಟು. ಕೃತಿಯ ಹೆಚ್ಚುಗಾರಿಕೆಯೆಂದರೆ, ಸಂಕ್ಷಿಪ್ತವಾಗಿ ಹೇಳಿರುವ ಜಯಕುಮಾರ್ ಅವರ ಬದುಕಿನ ವಿವರಗಳು ಅವರ ಒಟ್ಟೂ ಬದುಕನ್ನು ಕುರಿತಂತೆ ಓದುಗರಲ್ಲಿ ಸಮಗ್ರ ಎನ್ನಬಹುದಾದ ಚಿತ್ರವನ್ನು ಧ್ವನಿಸುವಲ್ಲಿ ಯಶಸ್ವಿಯಾಗುತ್ತದೆ ಎನ್ನುವುದು. ಅಕಾಲಿಕವಾಗಿ ಅಗಲಿದ ಜಯಕುಮಾರ್ ಅವರ ಸಮೃದ್ಧವಾದ, ಅರ್ಥಪೂರ್ಣವಾದ ಹಿನ್ನೆಲೆ ಮತ್ತು ಅವರ ವ್ಯಕ್ತಿತ್ವದ ಶಕ್ತಿಯನ್ನು ಈ ಕೃತಿ ಮತ್ತಷ್ಟು ಹೆಚ್ಚಿಸುತ್ತದೆ.

●